# ಪಿಳ್ಳೈ ಮಹಾಶಯರು

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

**ಕ**ನ್ಯಾಕುಮಾರಿ ಒಂದು ಸುಂದರ ಸ್ಥಳ. ಭಾರತಮಾತೆಯ ಶ್ರೀಚರಣ ಸ್ವರೂಪವಾಗಿರುವ ಈ ಪ್ರದೇಶ ಅಪೂರ್ವವಾದ ಸೌಂದರ್ಯದಿಂದ ಶೋಭಿಸುತ್ತದೆ. ಹಿಂದೂ ಮಹಾಸಾಗರ, ಅರಬ್ಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿ... ಈ ಮೂರೂ ಹರಿವುಗಳ ಸಂಗಮ ಸ್ಥಾನವಾದ ಕನ್ಯಾಕುಮಾರಿಯು ಒಂದು ಪವಿತ್ರ ತೀರ್ಥಯಾತ್ರಾ ಸ್ಥಳವಾಗಿರುವ ಕಾರಣ, ಧರ್ಮಭೀರುಗಳಾದ ಭಾರತೀಯರು ಇಲ್ಲಿ ದರ್ಶನಕ್ಕೆ ಬರುತ್ತಾರೆ.

ಪರಿವ್ರಾಜಕ ಸಂನ್ಯಾಸಿಯು ತಿರುಗಾಡುತ್ತ ಅಲ್ಲಿಗೆ ಬಂದು ತಲುಪಿದ ಮತ್ತು ತಿರುವಾಂಕೂರು ರಾಜ್ಯದ ಧರ್ಮಶಾಲೆ-ಅತಿಥಿಗೃಹದಲ್ಲಿ ತಂಗಿದ. ಒಬ್ಬ ನಿಷ್ಠಾವಂತ ಅಧಿಕಾರಿಯು ಬಹಳ ಪ್ರೀತಿಯಿಂದ ಸಂನ್ಯಾಸಿಗೆ ಉಳಿದುಕೊಳ್ಳುವ ಮತ್ತು ಭೋಜನದ ವ್ಯವಸ್ಥೆಯನ್ನು ಮಾಡಿದ್ದ. ಹಾಗಾಗಿ ಸಂನ್ಯಾಸಿ ಈ ವಿಷಯದಲ್ಲಿ ನಿಶ್ಚಿಂತನಾಗಿ, ಆ ಸ್ಥಳದ ಪವಿತ್ರ ಆನಂದದ ಅನುಭವವನ್ನು ತನ್ನದಾಗಿಸಿಕೊಳ್ಳುತ್ತಿದ್ದ. ಆದರೆ ಬೆಳಗಿನ ಕಾಫಿ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಕಾಫಿ ಕೊಡಲು ಬರುತ್ತಿದ್ದ ಒಬ್ಬ ಬ್ರಾಹ್ಮಣ, ಮಧ್ಯೆ ಮಧ್ಯೆ ತನ್ನ ಇತರ ಪೌರೋಹಿತ್ಯ ಕೆಲಸಗಳಲ್ಲೇ ಅಧಿಕ ಸಮಯ ಕಳೆದು, ಸಂನ್ಯಾಸಿಗೆ ತರುವಾಗ ಬಹಳಷ್ಟು ಹೊತ್ತಾಗುತ್ತಿತ್ತು. ಮೂರೂವರೆ ಹೊತ್ತಿಗೆ ಊಟ ಬರುತ್ತಿತ್ತು, ಬೆಳಗಿನ ಕಾಫಿಯಂತೂ ಒಂಭತ್ತು, ಒಂಭತ್ತೂವರೆ, ಹತ್ತು ಗಂಟೆಯೂ ಆಗುತ್ತಿತ್ತು. ಆದರೆ ರಾತ್ರಿ ಮಾತ್ರ ತಡವಾಗುತ್ತಿರಲಿಲ್ಲ. ಇದರಿಂದ ಸ್ವಲ್ಪ ತೊಂದರೆ ಆದರೂ ಸಹ ಸಂನ್ಯಾಸಿಯೂ ಸುಮ್ಮನೇ ಇದ್ದ, ಬೇರೆ ಉಪಾಯ ಇರಲಿಲ್ಲ ತಾನೇ.

ಒಂದು ದಿನವಂತೂ ಬೆಳಗಿನ ಹನ್ನೊಂದು ಗಂಟೆಯಾಗಿಬಿಟ್ಟಿತ್ತು, ಆದರೂ ಕಾಫಿ ಬಂದಿರಲಿಲ್ಲ. ಸಂನ್ಯಾಸಿಯು ತಂಗಿದ್ದ ಕೊಠಡಿಯ ಎದುರಿಗೆ, ಅಂಗಳದ ಆ ಭಾಗದ ಒಂದು ಕೊಠಡಿಯಲ್ಲಿ ಒಬ್ಬ ವೃದ್ಧ ದಂಪತಿ ಮೊದಲಿನಿಂದಲೂ ತಂಗಿದ್ದರು. ಆದರೆ ಅವರ ವಿಭಿನ್ನ ಜೀವನ ಶೈಲಿಯನ್ನು ನೋಡಿದ್ದ ಸಂನ್ಯಾಸಿಯು ಅವರ ಪರಿಚಯ ಮಾಡಿಕೊಳ್ಳುವ ತಂಟೆಗೆ ಹೋಗಿರಲಿಲ್ಲ. ಅವರೂ ಸಹ ಮಾತನಾಡಲು ಅಥವಾ ಚರ್ಚಿಸಲು ಬಂದಿರಲಿಲ್ಲ. ಆದರೆ ಆ ದಿನ ವೃದ್ಧರು ಬಂದು ಹೇಳಿದರು, ''ನನ್ನ ಹೆಂಡತಿ ಹೇಳುತ್ತಿದ್ದಳು, ಈಗಾಗಲೇ ಹನ್ನೆರಡರ ಸಮಯ, ಸ್ವಾಮೀಜಿಯವರಿಗೆ ಯಾರೂ ಕಾಫಿಯನ್ನು ತಂದುಕೊಟ್ಟಿಲ್ಲ. ಏನು ಸಮಾಚಾರ, ಯಾಕೆ ತಂದಿಲ್ಲ? ಆ ಬ್ರಾಹ್ಮಣ ಪ್ರತಿದಿನವೂ ತುಂಬಾ ತಡ ಮಾಡುತ್ತಾನೆ. ಇವತ್ತಂತೂ ಸಿಕ್ಕಾಪಟ್ಟೆ ಸಮಯವಾಗಿ ಹೋಯಿತು. ನಿಮಗೆ ಹಸಿವೆಯಾಗಿರಲೇಬೇಕು. ನಿಜ ಹೇಳಬೇಕೆಂದರೆ ಇದು ಕಾಫಿಯ ಸಮಯವಲ್ಲ, ಭೋಜನದ ಸಮಯ.''

''ಹೌದು, ಅವರು ಯಾಕೆ ಬಂದಿಲ್ಲವೋ ಗೊತ್ತಿಲ್ಲ. ಬಹುಶಃ ಯಾವುದೋ ಕಾರ್ಯಭಾರದಲ್ಲಿ ತೊಡಗಿರಬಹುದು ಅಥವಾ ಅವರ ಆರೋಗ್ಯ ಕೆಟ್ಟಿರಬಹುದು. ಅವರು ಮನೆಯಲ್ಲಿ ಒಬ್ಬರೇ ಇರುತ್ತಾರೆ. ಅವರ ತಂದೆ ಬಹಳ ವೃದ್ಧರು ಮತ್ತು ಮಂದಿರದಲ್ಲಿ ಕೆಲಸ ಮಾಡುವ ಕಾರಣ ಇಲ್ಲಿಯೂ ಕೆಲಸ ಮಾಡಲು ಸಾಧ್ಯವಾಗದಿರಬಹುದು.''

''ಅವರ ಮನೆ ಗೊತ್ತಿದೆಯೇ ನಿಮಗೆ?''

''ಇಲ್ಲ, ಎಂದೂ ಹೋಗಿಲ್ಲ. ಗೊತ್ತಿದ್ದರೂ ಸಹ ಈ ಸಮಯದಲ್ಲಿ ಅವರು ಸಿಗುವುದಿಲ್ಲ. ಪೌರೋಹಿತ್ಯ ಮಾಡುತ್ತಾರೆ. ಹಾಗಾಗಿ ಕೆಲಸ ಇದ್ದಿರಬಹುದು.''

ವೃದ್ಧರು ತಮ್ಮ ಕೊಠಡಿಯೊಳಗೆ ಹೋಗಿ ಪತ್ನಿಯ ಜೊತೆಗೆ ಮಾತನಾಡಿ ಮತ್ತೆ ಬಂದರು. ಕೈ ಮುಗಿದು, ''ಹಾಗಾದರೆ ಸ್ವಾಮೀಜಿ, ನನ್ನ ಪತ್ನಿ ಹೇಳುತ್ತಿದಳು.. ನಿಮ್ಮ ಅನುಮತಿ ಇದ್ದರೆ ಅವಳು ಒಲೆ ಪಾತ್ರೆ ಇತ್ಯಾದಿಗಳನ್ನು ಚೆನ್ನಾಗಿ ತೊಳೆದು ನಿಮಗೋಸ್ಕರ ಕಾಫಿ ತಯಾರು ಮಾಡುತ್ತಾಳಂತೆ. ಆಗಲೇ ಹನ್ನೆರಡಾಯ್ತು. ಏನಾದರೂ ಮಾಡಬೇಕು.''

''ಓ.. ಬಹಳ ಸಂತೋಷವಾಗಿ ಕಾಫಿ ಮಾಡಲಿ, ನನಗೇನೂ ಅಭ್ಯಂತರವಿಲ್ಲ'' ಎಂದ ಸಂನ್ಯಾಸಿಯ ಮಾತನ್ನು ಕೇಳಿ ವೃದ್ಧರು ದೌಡಾಯಿಸಿಕೊಂಡು ತನ್ನ ಕೊಠಡಿಗೆ ಹೋದರು. ವೃದ್ಧ ಮಾತೆಯು ಒಲೆ ಪಾತ್ರೆ ಇತ್ಯಾದಿಗಳನ್ನು ತೊಳೆದು, ಕಾಫಿ ತಯಾರಿಸಿ ಸೂಚನೆ ಕೊಟ್ಟಳು. ''ಕಾಫಿ ತಯಾರಾಗಿದೆ, ಅನುಮತಿ ಇದ್ದರೆ ಅಲ್ಲಿಗೇ ತೆಗೆದುಕೊಂಡು ಬರಬಹುದೇ ಅಥವಾ ನೀವೇ ಇಲ್ಲಿಗೆ ಬಂದರೆ ಇನ್ನೂ ಒಳ್ಳೆಯದಾಗಿತ್ತು.''

ಸಂನ್ಯಾಸಿಯು ವೃದ್ಧರೊಂದಿಗೆ ಅವರ ಕೊಠಡಿಗೆ ಹೋದ. ತುಂಬಾ ಹಸಿವೆಯಾಗಿತ್ತು. ವೃದ್ಧೆಯು ಬಹಳ ಪ್ರೀತಿಯಿಂದ ಬಿಸಿಬಿಸಿಯಾದ ಕಾಫಿಯನ್ನು ನೀಡುತ್ತಾ ಹೋದಳು, ಸಂನ್ಯಾಸಿಯೂ ಪ್ರೀತಿಯಿಂದ ಎರಡು ಮೂರು ಲೋಟಗಳಷ್ಟು ಕಾಫಿ ಹೀರಿದ.

''ಅನುಮತಿ ಕೊಟ್ಟರೆ ಇದೀಗ ತಾನೇ ಇಡ್ಲಿ ತಯಾರಿಸಿದೆ. ತುಂಬಾ ಚೆನ್ನಾಗಿರುತ್ತದೆ, ಹಗುರವಾಗಿರುವುದರಿಂದ ಬೇಗ ಪಚನ ವಾಗುತ್ತದೆ. ಹಾಗೇ ಚಟ್ನಿಯೂ ತಯಾರಿದೆ. ನಿಮಗೆ ಬಡಿಸಲಿ?''

''ಓ ಬಹಳ ಸಂತೋಷದಿಂದ... ಇಡ್ಲಿಯಂತೂ ತುಂಬಾ ಚೆನ್ನಾಗಿರುತ್ತದೆ.''

ಹೀಗೆ ಹೇಳಿದ ಮಾತನ್ನು ಕೇಳಿದ ವೃದ್ಧೆ ಆನಂದತುಂದಿಲ ಳಾದಳು. ಒಂದು ತಟ್ಟೆಯಲ್ಲಿ ನಾಲ್ಕೈದು ಇಡ್ಲಿ , ಚಟ್ನಿಯನ್ನು ಕೊಟ್ಟಳು. ಬಹಳ ರುಚಿಕರವಾಗಿತ್ತು. ಸಂನ್ಯಾಸಿ ತಿನ್ನುತ್ತಾ ಹೋದ. ಹಾಗೇ ಮಾತನಾಡುತ್ತಾ ದೇಶ, ಕಾಲ, ತಿಂಡಿ ತಯಾರಿಕೆ, ಹೀಗೆ ಸಾಮಾನ್ಯ ವಿಷಯಗಳನ್ನು ಮಾತನಾಡುತ್ತಾ ಹೋದ. ಏಳೆಂಟು ಇಡ್ಲಿಗಳೊಂದಿಗೆ ನಾಲ್ಕೈದು ಲೋಟ ಕಾಫಿಯ ಸಮಾರಾಧನೆ ಕೂಡ ಆಯ್ತು. ಆಗ ಸಂನ್ಯಾಸಿ, ಆ ವೃದ್ಧ ದಂಪತಿ ಕಣ್ಣೀರು ಸುರಿಸುವುದನ್ನು ನೋಡಿದ.

ಯಾಕೆ, ನನಗೆ ತುಂಬಾ ಹಸಿವಾಗಿತ್ತಲ್ಲ ಅದಕ್ಕಾಗಿಯೆ? ಸಂನ್ಯಾಸಿ ಹೀಗೆ ಯೋಚಿಸಿ ಹೇಳಿದ, ''ಸಂನ್ಯಾಸಾಶ್ರಮದ ಜೀವನ ದಲ್ಲಿ ಹೀಗೇ.. ಕೆಲವೊಮ್ಮೆ ಆಹಾರ ಸರಿಯಾದ ಸಮಯದಲ್ಲಿ ಸಿಗುತ್ತದೆ, ಕೆಲವೊಮ್ಮೆ ಯಾವಾಗಲೋ ಸಿಗುತ್ತದೆ, ಕೆಲವೊಮ್ಮೆ ಏನೂ ಸಿಗುವುದಿಲ್ಲ. ಹಸಿವು ಬಾಯಾರಿಕೆಯಿಂದ ಕಷ್ಟವಾಗುತ್ತದೆ, ಆದರೆ ನಿಯಂತ್ರಿಸಬೇಕಾಗುತ್ತದೆ. ಊಟದ ವಿಷಯದಲ್ಲಂತೂ ಬೇರೆಯವರನ್ನು ಅವಲಂಬಿಸಲೇಬೇಕಲ್ಲ. ನಿಮಗಂತೂ ತಿಳಿದೇ ಇದೆ, ಪರಾವಲಂಬನೆ ಯಾವ ರೂಪದಲ್ಲಿಯಾದರೂ ಸರಿ, ಸ್ವಲ್ಪ ಮುಜುಗರವನ್ನೇ ತರುತ್ತದೆ. ಆದರೆ ಸಂತೋಷವಾದಾಗ ಅದು ಕೇವಲ ಮಾನಸಿಕವಾಗಿರುತ್ತದೆ, ಮನಸ್ಸಿನಲ್ಲಂತೂ ಅದು ಸ್ವತಂತ್ರ ನಾಗಿರುವ ರಾಜನಂತೆ ಇರುತ್ತದೆ.''

ವೃದ್ಧ ಹೇಳಿದ, ''ಸ್ವಾಮೀಜಿ, ಈ ಮಾತು ಸರಿಯಾಗಿದೆ. ಆದರೆ ನಮ್ಮ ಜೀವನದಲ್ಲಿನ ಒಂದು ಅಪೂರ್ಣ ಇಚ್ಛೆಯು ಇಂದು ಪೂರ್ಣವಾಯಿತು. ಅದೇ ಸಂತೋಷ.. ನಾವು ಪಿಳ್ಳೈ ಎನ್ನುವ ಜನಾಂಗದವರು. ಬ್ರಾಹ್ಮಣರಾಗಲಿ ಸಂನ್ಯಾಸಿಯಾಗಲಿ ನಮ್ಮ ಕೈಯಿಂದ ಅನ್ನ ಸ್ವೀಕರಿಸುವುದಿಲ್ಲ. ಅವರು ನಮ್ಮನ್ನು ಶೂದ್ರರೆಂದು ಭಾವಿಸುತ್ತಾರೆ. ಆದರೆ ನಾವು ನಿಜವಾಗಿಯೂ ಕ್ಷತ್ರಿಯರು. ನಮ್ಮ ಕೈಯಿಂದ ತಯಾರಾದ ಅಡುಗೆಯನ್ನು ಸಂನ್ಯಾಸಿಯವರಿಗೆ ನೀಡಬೇಕೆಂಬ (ಗೃಹಿಣಿಯತ್ತ ಕೈ ತೋರಿಸಿ) ಇವಳ ಇಚ್ಛೆ ಇಲ್ಲಿಯವರೆಗೂ ಅಪೂರ್ಣವಾಗಿತ್ತು. ಈಶ್ವರನ ಅನುಗ್ರಹದಿಂದ ಅದು ಪೂರ್ಣವಾಯಿತು. ಹಾಗಾಗಿ ಅತಿ ಸಂತೋಷ ಮತ್ತು ಆನಂದದಿಂದ ನಮ್ಮ ಹೃದಯ ತುಂಬಿ ಬಂದಿದೆ ಮತ್ತು ನಮ್ಮ ಆನಂದಬಾಷ್ಪವನ್ನು ತಡೆಯಲು ಸಾಧ್ಯ ವಾಗುತ್ತಿಲ್ಲ.'' (ಶ್ರೀ ಪಿಳ್ಳೆಯವರು ಒಬ್ಬ ಸೇವಾ ನಿವೃತ್ತ ಪೊಲೀಸ್ ಅಧಿಕಾರಿಯಾಗಿದ್ದರು).

ಅವರ ಮಾತನ್ನು ಕೇಳಿ ಸಂನ್ಯಾಸಿಗೆ ಹೃದಯ ತುಂಬಿ ಬಂತು. ಮತ್ತು ಅಶ್ರುಪೂರಿತ ನಯನಗಳನ್ನು ಒರೆಸುತ್ತ ಹೇಳಿದ, ''ಸಂನ್ಯಾಸವನ್ನು ತೆಗೆದುಕೊಳ್ಳುವ ಸಮಯದಲ್ಲಂತೂ ಜಾತಿ–ಗೀತಿ ಎಲ್ಲ ಬಿಡಬೇಕೆಂಬ ಸಂಕಲ್ಪದೊಂದಿಗೆ ಅಗ್ನಿಯಲ್ಲಿ ಆಹುತಿ ನೀಡಬೇಕು, ನಂತರ ಹಾಗೇ ಆಚರಣೆ ಮಾಡಬೇಕು.

''ಹಾ, ಶುಚಿ–ಅಶುಚಿಯ ವಿಚಾರವಂತೂ ಇದ್ದೇ ಇದೆ. ಆರೋಗ್ಯಕ್ಕೆ ಆವಶ್ಯಕವೂ ಹೌದು. ಶುದ್ಧತೆ ಹಾಗೂ ಶುಚಿತ್ವ ದೊಂದಿಗೆ ಯಾರು ಅನ್ನ ಸಿದ್ಧ ಪಡಿಸುತ್ತಾರೋ, ಅದನ್ನು ಸತ್ ಶೂದ್ರ ಅಂದರೆ ಸಂಸ್ಕಾರವಂತ ಶೂದ್ರರ ಕೈಯಿಂದ ತೆಗೆದು ಕೊಂಡಾಗ ಏನೂ ದೋಷವಿರುವುದಿಲ್ಲ. ವೈದಿಕ ಬ್ರಾಹ್ಮಣ ಗ್ರಂಥ ಗಳ ಪ್ರಕಾರ ಆ ದಿನಗಳಲ್ಲಿ ಎಲ್ಲರೂ ಶೂದ್ರರೇ ಆಗಿದ್ದರು. ಇರಲಿ, ಇದು ವಿವಾದದ ವಿಷಯವಾದ್ದರಿಂದ ಅದನ್ನು ಇಲ್ಲಿಗೆ ಬಿಡೋಣ. ಆದರೆ ಒಬ್ಬ ವ್ಯಕ್ತಿಯು ಶುದ್ಧ ಸಂಸ್ಕಾರದವನಾಗಿದ್ದು, ಭಗವದ್ಭಕ್ತ ಹಾಗೂ ಧರ್ಮಪರಾಯಣನಾಗಿದ್ದರೆ, ನಾವಂತೂ ಯಾರಲ್ಲೂ ಭೇದ ಮಾಡುವುದಿಲ್ಲ. ಅನ್ನ ಇತ್ಯಾದಿ ಖಾದ್ಯಗಳನ್ನು ಪ್ರೇಮ ದಿಂದ ಸ್ವೀಕರಿಸಿದರೆ ಮತ್ತು ಸಿಕ್ಕ ಅನ್ನವನ್ನು ಬ್ರಹ್ಮಾರ್ಪಣ ಮಾಡಿ ಭುಂಜಿಸುತ್ತೇವೆ. ಹಾಗಾಗಿ ಒಂದು ವೇಳೆ ಗೊತ್ತಿಲ್ಲದೆ ಏನಾದರೂ ಅಶುದ್ಧಿಯಾಗಿದ್ದರೆ, ಅದನ್ನು ಶಾಸ್ತ್ರ ಹಾಗೂ ಆಚಾರ್ಯರ ನಿರ್ದೇಶನದಂತೆ ಶುದ್ಧೀಕರಣ ಮಾಡಲಾಗುತ್ತದೆ. ಎಲ್ಲವೂ ಸಂಸ್ಕಾರ ಮತ್ತು ವಿಚಾರವಂತ ಮಾನಸಿಕ ಸ್ಥಿತಿಯ ಮೇಲೆ ಅವಲಂಬಿತವಾಗಿದೆ. ಹಿಂದೂಧರ್ಮದಲ್ಲಿ ಬಹಳಷ್ಟು ಈ ರೀತಿಯ ಅವೈದಿಕ ಸಂಸ್ಕಾರಗಳು ನುಸುಳಿಬಿಟ್ಟಿವೆ. ಅವನ್ನು ವೇದಗಳ ಸಹಾಯದಿಂದ ಮತ್ತು ಋಷಿ ಜೀವನದಲ್ಲಿನ ವಿಚಾರ ಗಳ ಮೂಲಕ ಪರಿಶುದ್ಧಿ ಮಾಡುವ ಅಗತ್ಯವಿದೆ. ಹಾಗಾದಾಗ ಭಾರತೀಯರು ಲೋಕದಲ್ಲಿ ಮತ್ತಷ್ಟು ಗೌರವಯುತರಾಗು ತ್ತಾರೆ.''

ಪಿಳ್ಳೈ ದಂಪತಿಗಳು: (ಕೈಮುಗಿದು) ''ಹಾಗಾದರೆ ಸ್ವಾಮೀಜಿ, ನಮ್ಮಲ್ಲಿ ಪ್ರತಿದಿನ ಕಾಫಿ ಕುಡಿಯಿರಿ. ನೀವು ಬಂದಾಗಿನಿಂದ ಬಹಳ ತಡವಾಗಿ ಕಾಫಿ ಮತ್ತು ಊಟ ತರುವುದನ್ನು ನೋಡಿ ನಮ್ಮಿಬ್ಬರಿಗೂ ಬಹಳ ದುಃಖವಾಗುತ್ತಿತ್ತು. ನನ್ನ ಪತ್ನಿಯಂತೂ ಬಾರಿಬಾರಿಗೂ ಹೇಳುತ್ತಿದ್ದಳು, ಆ ಬ್ರಾಹ್ಮಣ ಎಷ್ಟು ತಡ ಮಾಡುತ್ತಾರೆ.. ಸ್ವಾಮೀಜಿಗೆ ಎಷ್ಟು ಕಷ್ಟವಾಗುತ್ತಿರಬಹುದು.. ಎಂದು. ಆದರೆ ಭಯ ಮತ್ತು ಸಂಕೋಚದಿಂದ ನಾವು ನಿಮ್ಮೊಂ ದಿಗೆ ಏನೂ ಹೇಳಲಿಲ್ಲ, ನಿಮ್ಮಲ್ಲಿಗೆ ಬರಲೂ ಇಲ್ಲ. ಇವತ್ತು ತುಂಬಾ ಆನಂದವಾಗಿದೆ. ಮನಸ್ಸಿನಲ್ಲಿ ಸಂತೋಷವಿದೆ.'' ಅವರಿ ಬ್ಬರ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಲೇ ಇತ್ತು.

ಇದರಲ್ಲಿತ್ತು ಧಾರ್ಮಿಕ ಭಾವನೆಯೊಂದಿಗೆ ಮಾನವತೆಯ ಒಂದು ಸುಂದರ ಅನುಭೂತಿ... ❋